ಪ್ರಾರ್ಥನೆ

# ಶ್ರೀ ಲಲಿತಾಪಂಚರತ್ನಂ

**ಪ್ರಾತಃಸ್ಮರಾಮಿ ಲಲಿತಾವದನಾರವಿಂದಂ**
**ಬಿಂಬಾಧರಂ ಪೃಥುಲಮೌಕ್ತಿಕಶೋಭಿನಾಸಂ ।**
**ಆಕರ್ಣದೀರ್ಘನಯನಂ ಮಣಿಕುಂಡಲಾಢ್ಯಂ**
**ಮಂದಸ್ಮಿತಂ ಮೃಗಮದೋಜ್ಜ್ವಲಫಾಲದೇಶಂ ॥ ೧ ॥**

ತೊಂಡೆಯ ಹಣ್ಣಿನಂತೆ ಕೆಂಪಾದ ತುಟಿಗಳು, ದೊಡ್ಡ ಮುತ್ತಿನ ಮೂಗುತಿಯಿಂದ ಶೋಭಿಸುತ್ತಿರುವ ಮೂಗು, ಕಿವಿಯವರೆಗೆ ಚಾಚಿದ ವಿಶಾಲವಾದ ಕಣ್ಣುಗಳು, ರತ್ನದ ಆಭರಣಗಳಿಂದ ಬೆಳಗುತ್ತಿರುವ ಕಿವಿಗಳು, ಕಸ್ತೂರೀತಿಲಕದಿಂದ ಪ್ರಕಾಶಿತವಾದ ಹಣೆ – ಇವುಗಳಿಂದ ಕೂಡಿ, ಮೃದು ಮಂದಹಾಸದಿಂದ ಮಿರುಗುತ್ತಿರುವ ಶ್ರೀ ಲಲಿತೆಯ ಮುಖಕಮಲವನ್ನು ಬೆಳಗಿನ ಸಮಯದಲ್ಲಿ ಸ್ಮರಿಸುತ್ತೇನೆ.

**ಪ್ರಾತರ್ಭಜಾಮಿ ಲಲಿತಾಭುಜಕಲ್ಪವಲ್ಲೀಂ**
**ರಕ್ತಾಂಗುಲೀಯಲಸದಂಗುಲಿಪಲ್ಲವಾಢ್ಯಾಂ ।**
**ಮಾಣಿಕ್ಯ ಹೇಮವಲಯಾಂಗದಶೋಭಮಾನಾಂ**
**ಪುಂಡ್ರೇಕ್ಷುಚಾಪಕುಸುಮೇಷು ಸೃಣೀರ್ದಧಾನಾಂ ॥ ೨ ॥**

ಕೆಂಪಾದ ಉಂಗುರದಿಂದ ಶೋಭಿಸುತ್ತಾ ಚಿಗುರನ್ನು ಹೋಲುವ ಬೆರಳುಗಳಿಂದ ಕೂಡಿದ ಹಸ್ತ, ಮಾಣಿಕ್ಯಖಚಿತ ಚಿನ್ನದ ಬಳೆಗಳಿಂದಲೂ ಭುಜಕೀರ್ತಿಗಳಿಂದಲೂ ಅಲಂಕೃತವಾಗಿರುವ ತೋಳುಗಳು, ಹಳದಿ ಕೆಂಪು ಪಟ್ಟಿಗಳಿರುವ ಉದ್ದವಾದ ಕಬ್ಬಿನ ಬಿಲ್ಲು ಹಾಗೂ ಹೂ ಬಾಣಗಳನ್ನು ಹಿಡಿದಿರುವ ಕೈಗಳು, ಇವುಗಳಿಂದ ಕೂಡಿ, ಬೇಡಿದ್ದನ್ನು ಕರುಣಿಸುವ ಕಲ್ಪವೃಕ್ಷದಂತಿರುವ ಶ್ರೀಲಲಿತೆಯ ಭುಜಗಳನ್ನು ಭಜಿಸುತ್ತೇನೆ.

**ಪ್ರಾತರ್ನಮಾಮಿ ಲಲಿತಾಚರಣಾರವಿಂದಂ**
**ಭಕ್ತೇಷ್ಟದಾನನಿರತಂ ಭವಸಿಂಧುಪೋತಮ್ ।**
**ಪದ್ಮಾಸನಾದಿಸುರನಾಯಕ ಪೂಜನೀಯಂ**
**ಪದ್ಮಾಂಕುಶಧ್ವಜಸುದರ್ಶನಲಾಂಛನಾಢ್ಯಮ್ ॥ ೩ ॥**

ಭಕ್ತರ ಅಭೀಷ್ಟವನ್ನು ಕರುಣಿಸುವುದರಲ್ಲಿ ನಿರತವಾದ, ಭವಸಾಗರವನ್ನು ದಾಟಿಸುವ ನೌಕೆಯಂತಿರುವ, ಬ್ರಹ್ಮ ಇಂದ್ರ ಮೊದಲಾದ ದೇವಾದಿದೇವತೆಗಳಿಂದಲೂ ಪೂಜಿಸಲ್ಪಡುವ, ಪದ್ಮ ಅಂಕುಶ ಧ್ವಜ ಚಕ್ರ ಮೊದಲಾದ ಚಿಹ್ನೆಗಳಿಂದ ಕೂಡಿದ, ಪವಿತ್ರವಾದ ಲಲಿತೆಯ ಚರಣಾರವಿಂದಗಳನ್ನು ಬೆಳಿಗ್ಗೆ ನಮಿಸುತ್ತೇನೆ.

**ಪ್ರಾತಃ ಸ್ತುವೇ ಪರಶಿವಾಂ ಲಲಿತಾಂ ಭವಾನೀಂ**
**ತ್ರಯ್ಯಂತವೇದ್ಯವಿಭವಾಂ ಕರುಣಾನವದ್ಯಾಮ್ ।**
**ವಿಶ್ವಸ್ಯ ಸೃಷ್ಟಿವಿಲಯಸ್ಥಿತಿಹೇತುಭೂತಾಂ**
**ವಿದ್ಯೇಶ್ವರೀಂ ನಿಗಮವಾಙ್ಮನಸಾತಿದೂರಾಮ್ ॥ ೪ ॥**

ವೇದಾಂತಗಳಲ್ಲಿ ಕೊಂಡಾಡಲ್ಪಡುವ ವೈಭವವುಳ್ಳ, ಕರುಣಾಪೂರ್ಣಳೂ ಶ್ರೇಷ್ಠಳೂ ಆದ, ವಿಶ್ವದ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣಳೂ ಆದ, ವಿದ್ಯೆಗಳಿಗೆ ಒಡತಿಯಾದ, ವೇದದ ಮಾತುಗಳಿಗೂ ಮನಸ್ಸಿಗೂ ನಿಲುಕದ, ಪರಶಿವೆಯಾದ, ಭವಾನಿ (ಭವನಸತಿ) ಯಾಗಿರುವ ಲಲಿತೆಯನ್ನು ಬೆಳಿಗ್ಗೆ ಸ್ತುತಿಸುತ್ತೇನೆ.



**ಪ್ರಾತರ್ವದಾಮಿ ಲಲಿತೇ ತವ ಪುಣ್ಯನಾಮ**
**ಕಾಮೇಶ್ವರೀತಿ ಕಮಲೇತಿ ಮಹೇಶ್ವರೀತಿ ।**
**ಶ್ರೀಶಾಂಭವೀತಿ ಜಗತಾಂ ಜನನೀ ಪರೇತಿ**
**ವಾಗ್ದೇವತೇತಿ ವಚಸಾ ತ್ರಿಪುರೇಶ್ವರೀತಿ ॥ ೫ ॥**

ಕಾಮೇಶ್ವರಿ, ಕಮಲಾ, ಮಹೇಶ್ವರಿ, ಶಾಂಭವಿ, ಜಗಜ್ಜನನಿ ಪರಾ, ವಾಗ್ದೇವತೆ, ತ್ರಿಪುರೇಶ್ವರಿ ಎಂಬ ಈ ನಿನ್ನ ಪವಿತ್ರ ನಾಮಗಳಿಂದ, ಅಮ್ಮ ಲಲಿತೆ, ಬೆಳಿಗ್ಗೆ ನಾನು ನಿನ್ನನ್ನು ಕೊಂಡಾಡುತ್ತೇನೆ.

**ಯಃ ಶ್ಲೋಕಪಂಚಕಮಿದಂ ಲಲಿತಾಂಬಿಕಾಯಾಃ**
**ಸೌಭಾಗ್ಯದಂ ಸುಲಲಿತಂ ಪಠತಿ ಪ್ರಭಾತೇ ।**
**ತಸ್ಮೈ ದದಾತಿ ಲಲಿತಾ ಝಟಿತಿ ಪ್ರಸನ್ನಾ**
**ವಿದ್ಯಾಂ ಶ್ರಿಯಂ ವಿಮಲಸೌಖ್ಯಮನಂತಕೀರ್ತಿಮ್ ॥ ೬ ॥**

ಸೌಭಾಗ್ಯವನ್ನು ಕರುಣಿಸುವ ಸುಲಲಿತವಾದ ಲಲಿತಾಂಬಿಕೆಯ ಈ ಶ್ಲೋಕ ಪಂಚಕವನ್ನು ಬೆಳಿಗ್ಗೆ ಯಾರು ಪಠಿಸುವರೋ ಅವರಿಗೆ ಲಲಿತೆ ಕ್ಷಣಮಾತ್ರದಲ್ಲಿ ಪ್ರಸನ್ನಳಾಗುವಳು. ವಿದ್ಯೆ, ಐಶ್ವರ್ಯ, ನಿರ್ಮಲ ಸೌಖ್ಯ, ಅನಂತ ಕೀರ್ತಿಗಳನ್ನು ದೇವಿಯು ಅವರಿಗೆ ಕರುಣಿಸುವಳು.

— ಶ್ರೀ ಶಂಕರಾಚಾರ್ಯ